# ಸಾಮಾಜಿಕ ಸುಧಾರಣೆಯಲ್ಲಿ ಕುವೆಂಪುರವರ ಕವಿತೆಗಳ ಪಾತ್ರ

**ಜೆ. ರಾಜ ಗುಂಡಾಪುರ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ರಾಮನಗರ.

**Received: 10-06-2024 ; Acepted: 10-07-2024 ; Published: 11-08-2024**

**DOI: https://doi.org/10.5281/zenodo.13284050**

**ABSTRACT:**

ಹೊಸಗನ್ನಡ ಸಾಹಿತ್ಯದ ಮಹತ್ವದ ಕವಿ, ರಾಷ್ಟ್ರಕವಿ, ವಿಶ್ವಮಾನವ ಪ್ರಜ್ಞೆ ಬೆಳೆಸಿಕೊಂಡು ನಾಡಿಗೆಲ್ಲಾ ಹಬ್ಬಿದ ಕವಿ ಕುವೆಂಪು. 20ನೆಯ ಶತಮಾನದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಬೆಳಗಿದ ಮಹಾಕವಿ. ಹೊಸ ಸಾಂಸ್ಕೃತಿಕ ಸ್ಥಿತ್ಯಂತರದಲ್ಲಿ ವಸಾಹತು ಅನುಭವದೊಟ್ಟಿಗೆ ಬೆಳೆಯುತ್ತಲೇ ಕನ್ನಡ ನಾಡು-ನುಡಿಯ ಪುನಶ್ಚೇತನಕ್ಕೆ ಕಾರಣರಾದ ಮಹಾಚೇತನ ಕುವೆಂಪು.

ಕುವೆಂಪು ಕುಪ್ಪಳ್ಳಿಯಲ್ಲಿ ಹುಟ್ಟಿ ವಿಶ್ವಮಾನವರಾದ ಚರಿತೆ ಬಹಳ ದೊಡ್ಡದು. ಮಲೆನಾಡಿನ ದಟ್ಟ ಕಾಡಿನ ಮಧ್ಯದ ಊರಿನಿಂದ ಕುವೆಂಪುರವರ ಚಿಂತನೆಯು ಜಿಗಿದು ಅನಿಕೇತನವಾಗುವ, ನಿರಂಕುಶ ಮತಿಯಾಗುವ ಹಾದಿ ಸಾಧನೆಯ ಹಾದಿಯದು.

ಕುವೆಂಪುರವರು ನಮ್ಮ ಸಂಸ್ಕೃತಿ, ಆಚಾರ ವಿಚಾರ, ಪುರಾಣ, ವೇದ ಉಪನಿಷತ್ತುಗಳ ಆಳಕ್ಕೆ ಬೇರಿಳಿಸಿ ಸೋಸಿ ಇವತ್ತಿಗೂ ಅವಶ್ಯವಿರುವ ಮಾನವರ ಚಿಂತನೆಗಳನ್ನು ಹೀರಿ, ಪಾಶ್ಚತ್ಯ ಜ್ಞಾನ, ವಿಜ್ಞಾನ, ಸಾಹಿತ್ಯ, ತತ್ವಜ್ಞಾನದ ತಿಳುವಳಿಯನ್ನು ಮೈತುಂಬಿಕೊಂಡು ವೈಚಾರಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವವರು. ಪ್ರಾದೇಶಿಕತೆಯ ವಿಶಿಷ್ಟತೆಯೊಂದಿಗೆ ಜಾಗತಿಕವಾಗಬಲ್ಲ ಕೃತಿಗಳನ್ನು ರಚಿಸಿದರು. ಅವರು ರೂಪಿಸಿಕೊಟ್ಟ ಸರ್ವೋದಯ, ಸಮನ್ವಯ, ಮನಜಮತ ವಿಶ್ವಪಥ, ಪೂರ್ಣ ದೃಷ್ಟಿ ಎಂಬ ತಾತ್ವಿಕ ಚಿಂತನೆಗಳು ಕಲಾತೀತ ಮೌಲ್ಯಗಳಾಗಿವೆ. ಆತ್ಮಶ್ರೀಗಾಗಿ ನಿರಂಕುಶ ಮಿತಿಗಾಗಿ ಎಂದು ಯುವಕರಿಗೆ ಕರೆ ನೀಡುತ್ತಾ ಕುವೆಂಪುರವರು ನೀಡಿದ ವಿಚಾರ ಕ್ರಾಂತಿಗೆ ಆಹ್ವಾನ ಎಂಬುದು ಅಂದಿಗೆ ಸಾಂಸ್ಕೃತಿಕ ಕ್ರಾಂತಿಯೇ ಆಯಿತು. ಜೀವ ಜಗದೊಡನೆ ಮಾನವ ಜನಾಂಗವನ್ನು ಒಳಗೊಳ್ಳುವ ಕುವೆಂಪುರವರ ಚಿಂತನೆಗಳು ವೈಚಾರಿಕತೆಯಿಂದ ಪ್ರಗತಿಪರವಾಗಿವೆ.

**KEYWORDS:**

ಕುವೆಂಪು, ಕವಿತೆ, ಸಾಮಾಜಿಕ, ಪುರೋಹಿತ, ವೈಚಾರಿಕತೆ, ಸರ್ವೋದಯ, ಮನುಜ ಮತ.

ಕುವೆಂಪುರವರ ಮುಖ್ಯ ಕಾಳಜಿ ಮಾನವನ ಉದ್ಧಾರ. ಅದೂ ಜೀವ ಜಗತ್ತಿನೊಳಗೆ ಒಂದಾಗಿ ಚೆಂದಾಗಿ ಮಾನವ ಬದುಕಬೇಕೆಂಬುದು. ಕುವೆಂಪು ಅವರ ವೈಚಾರಿಕತೆ ಶುಷ್ಕ ವೈಚಾರಿಕತೆಯಲ್ಲ ಹಳೆಯದನ್ನೆಲ್ಲಾ ಬಿಸಾಡಬೇಕು ಎನ್ನುವಂತದ್ದಲ್ಲ. “ಹಳೆಯ ಕಾಲದ ಒಡವೆಗಳು ಬೇಡ ಅನ್ನುವುದಾದರೆ ಅವುಗಳನ್ನು ಕರಗಿಸಿ ಹೊಸ ಒಡವೆಗಳನ್ನು ಮಾಡಬಹುದು, ಆದರೆ ಚಿನ್ನ ಎಂದೂ ಬೆಲೆಯುಳ್ಳದ್ದು ಅನ್ನುವುದನ್ನು ಮರೆಯಬಾರದು”

ಎನ್ನುವ ಕುವೆಂಪು ಅವರು ಭಾರತೀಯರಲ್ಲಿದ್ದ ಮೌಢ್ಯವನ್ನು ಪುರೋಹಿತ ಶಾಹಿತನವನ್ನು, ಜಾತಿ ಮತ, ಬ್ರಾಂತಿ ಮತ, ಮೌಢ್ಯಗಳನ್ನು, ಮೇಲು-ಕೀಳು ಭಾವವನ್ನು ನಿರಾಕರಿಸಿದರು. ಅದರೊಟ್ಟಿಗೆ ತಪಸ್ಸು, ಧ್ಯಾನ, ಆಧ್ಯಾತ್ಮ ಸಮಾನಭಾವ ಮೊದಲಾದವುಗಳನ್ನು ಒಳಗೊಂಡ ಆಧುನಿಕ ಪ್ರಜಾಸತ್ತಾತ್ಮಕವಾದ ವೈಚಾರಿಕತೆಯನ್ನು ಪ್ರಚಾರಪಡಿಸಿದರು.[1]

ಕುವೆಂಪು "ಯಾವ ಕಾಲದ ಶಾಸ್ತ್ರ ಏನು ಹೇಳಿದ್ದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?" ಎಂದು ತಿಳಿಸಿ ಪ್ರಶ್ನಿಸುತ್ತಲೇ, ನಿರಂಕುಶಮತಿಗಳಾಗಿ ಎಂದು ಸಾರಿದರು "ವಿಚಾರ ಕ್ರಾಂತಿಗೆ ಆಹ್ವಾನ" "ಆತ್ಮಶ್ರೀಗಾಗಿ ನಿರಂಕುಶಮತಗಳಾಗಿ "ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ" ಇತ್ಯಾದಿ ಕೃತಿಗಳು ಮತ್ತು ಭಾಷಣಗಳ ಮೂಲಕ ನಾಡಿನ ಜನತೆಯಲ್ಲಿ ವೈಚಾರಿಕ ತಿಳುವಳಿಕೆ ಮೂಡಿಸಲು ಪ್ರಯತ್ನಿಸಿದರು.

**ಕುವೆಂಪು ಕವಿತೆಗಳಲ್ಲಿ ವೈಚಾರಿಕತೆ :**

ಕುವೆಂಪುರವರು ನವೋದಯ ಕನ್ನಡ ಸಾಹಿತ್ಯದ ಪ್ರಮುಖ ಕವಿ, ರಮ್ಯಕವಿ, ನಿಸರ್ಗಕವಿ ಎಂದೇ ಹೆಸರಾದವರು. ಕುವೆಂಪುರವರು ತಮ್ಮದೇ ಆದ ವಿಶಿಷ್ಟ ಕಾವ್ಯ ರಚನೆಯಿಂದ ಉನ್ನತ ದರ್ಶನದಿಂದ, ಸಾಮಾಜಿಕ ಕಳಕಳಿಯಿಂದ ವೈವಿಧ್ಯಮಯವಾದ ವಿಫಲವಾದ ವಸ್ತುಗಳ ಆಯ್ಕೆಯಿಂದ ತತ್ವ ಭರಿತವಾದ ಕವಿತೆಗಳನ್ನು ಬರೆದಿದ್ದಾರೆ. ಆ ಮೂಲಕವೇ ಕನ್ನಡ ಸಾಹಿತ್ಯದ ಯುಗದ ಕವಿ ಜಗದ ಕವಿ ಎಂದು ಹೆಸರಾಗಿದ್ದಾರೆ.

ಕುವೆಂಪುರವರು ಮೊದಲು ಬರೆದದ್ದು ಕವಿತೆ ಅಥವಾ ಪದ್ಯವನ್ನೇ. ಆರಂಭದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ನಂತರ ಕನ್ನಡವನ್ನೇ ಉಸಿರಾಗಿಸಿಕೊಂಡವರು. ಅವರ ಮೊದಲ ಕವನ ಸಂಕಲನ "ಕೊಳಲು" ಅದರ ಮೊದಲ ಕವಿತೆ "ಗೊಲ್ಲನ ಬಿನ್ನಪ".

**"ಕಾಡಿದ ಕೊಳಲಿದು ಕಾಡಕವಿಯು ನಾ**
**ನಾಡಿನ ಜನರೊಲಿ ದಾಲಿಪುದು"**

ಮೊದಲ ಸಂಕಲನದ ಮೊದಲ ಕವಿತೆಯಲ್ಲೇ ನಾನು "ಕಾಡಕವಿ" ನಿಸರ್ಗಕವಿ ಎಂದು ಕವಿ ತನ್ನನ್ನೇ ತಾನು ಘೋಷಿಸಿಕೊಂಡಿದ್ದಾರೆ. ಮಲೆನಾಡಿನ ಮಡಿಲಿನಲ್ಲಿ ಬೆಳೆದ ಕುವೆಂಪುರವರನ್ನು ಸಂಪೂರ್ಣವಾಗಿ ಆವರಿಸಿಕೊಂಡಿದ್ದು ಪ್ರಕೃತಿ. ಅಂದರೆ ನಿಸರ್ಗದ ಸೊಬಗು ತಾನು ಪ್ರಕೃತಿಯ ಅವಿಭಾಜ್ಯ ಅಂಗವೆಂಬ ಅರಿವಿನೊಂದಿಗೆ ಕುವೆಂಪು ಬೆಳೆದವರು. ಹೀಗಾಗಿ ಸಮಾನತೆ, ಸಮತಾಭಾವ, ಜಡ ಮತ್ತು ಚೇತನವೆಂಬ ಭೇದ ಭಾವವಿಲ್ಲದ ಮನೋಭಾವ ಇವೆಲ್ಲವನ್ನು ಕುವೆಂಪು ನಿಸರ್ಗದ ಒಡನಾಟದಲ್ಲಿ ಕಂಡುಕೊಂಡರು. ಹೀಗೆ ಕಂಡುಕೊಂಡ ತಿಳುವಳಿಕೆಯನ್ನು ವ್ಯಕ್ತಿತ್ವವನ್ನಾಗಿಸಿಕೊಂಡ ಕುವೆಂಪುರವರಲ್ಲಿ ವೈಚಾರಿಕತೆಯ ಪ್ರಜ್ಞೆ ಮೊಳೆತು, ಸಾಹಿತ್ಯ ಧಾರೆಯಾಗಿ ಹರಿಯಲು ನೆರವಾದದ್ದು ಮಲೆನಾಡಿನ ನಿಸರ್ಗವೇ, ಅಲ್ಲಿನ ಸಮಾಜವೆ.

ಪ್ರಕೃತಿ ಗೀತೆಗಳನ್ನು ವಿಫಲವಾಗಿ ಬರೆದುವರು ಕುವೆಂಪು "ಸೂರ್ಯೋದಯ, ಚಂದ್ರೋದಯ ದೇವರದಯೆ ಕಾಣೋ" ಎಂದೆನ್ನುತ್ತಾ, ದೇವರ ಅಸ್ತಿತ್ವವನ್ನು ಗುಡಿ ಗೋಪುರಗಳಚೆಗೆ ತಂದು ತಮ್ಮ ಕವಿತೆಗಳ ಮೂಲಕ ಪ್ರಕೃತಿಯನ್ನೇ ದೇವರನ್ನಾಗಿಸಿ

ಸೂರ್ಯ, ಚಂದ್ರ, ಗಿಡ-ಮರ, ಬೆಟ್ಟ-ಗುಡ್ಡ, ನೀರು ನೆಲೆಯನ್ನೇ ದೇವರೆಂದು ಕರೆದರು. "ತೆಗೆ ಜಡವೆಂಬುದು ಬರಿಸುಳ್ಳು" ಎನ್ನುತ್ತಾರೆ. ಕುವೆಂಪು ಅವರ ಬಹುಪಾಲು ಕವಿತೆಗಳು ನಿಸರ್ಗದ ವರ್ಣನೆಯಿಂದ, ಅದರ ಬೃಹತ್, ಮಹತ್, ಗಾಢತೆಯ ಪರಿಚಯದಿಂದ ಕೂಡಿವೆ.

ಕುವೆಂಪು ನಿಸರ್ಗಗೀತೆಗಳನ್ನು ಮಾತ್ರವಲ್ಲದೆ ಸಾಮಾಜಿಕ ಕವಿತೆಗಳನ್ನು, ಸಮಾಜದ ಪಿಡುಗುಗಳನ್ನು ಎತ್ತಿ ತೋರಿ, ತಿದ್ದುವ ಸಮಾಜದ ಸುಧಾರಣಾ ಕವಿತೆಗಳನ್ನು ಬರೆದಿದ್ದಾರೆ. "ಕುವೆಂಪುರವರ ಕವಿತೆಗಳು ಕೇವಲ ಸೌಂದರ್ಯ ನಿಷ್ಠೆಯ ಹಾಗೂ ಅವುಗಳ ರಚನಾ ಕೌಶಲ್ಯದ ಬೆರಗಿನಲ್ಲಿ ಓದುಗರನ್ನು ನಿಲ್ಲಿಸುವ ಕವಿತೆಗಳಲ್ಲಿ, ಅವುಗಳ ಹಿಂದೆ ಗಟ್ಟಿಮುಟ್ಟಾದ ವೈಚಾರಿಕತೆಯೊಂದು ಕ್ರಿಯಾಶೀಲವಾಗಿದೆ. ಕುವೆಂಪು ಅವರ ಕವಿತೆಗಳಲ್ಲಿ ಸೌಂದರ್ಯನಿಷ್ಠೆ, ಆಧ್ಯಾತ್ಮಿಕ ನಿಲುವು ಮತ್ತು ವೈಚಾರಿಕತೆಗಳು ಒಂದರಿಂದ ಮತ್ತೊಂದು ಬೇರ್ಪಡಿಸಲಾಗದಂತೆ ಹಣೆದುಕೊಂಡಿವೆ,"[2] ಎಂದು ಜಿ.ಎಸ್. ಶಿವರುದ್ರಪ್ಪನವರು ಕುವೆಂಪು ಕಾವ್ಯಗಳನ್ನು ಕುರಿತು ವಿಶ್ಲೇಷಿಸಿದ್ದಾರೆ.

ಸಾಮಾಜಿಕ ಸಮಾನತೆ, ಸಮಾಜವಾದಿ ಹಾಗೂ ವೈಜ್ಞಾನಿಕ ವಿಚಾರಗಳನ್ನು ಒಳಗೊಂಡ ಕುವೆಂಪುರವರ ಕವಿತೆಗಳಿಗೆ ಅವರ ಕವಿತೆಗಳೇ ಸಾಟಿ. ನವೋದಯ ಕಾಲದ ಹೊಸಹಾತುಶಾಹಿ ಅನುಭವದೊಂದಿಗೆ ಸಾಂಸ್ಕೃತಿಕ ಬದಲಾವಣೆಯ ಕಾಲಘಟ್ಟದ ಹೊಸ ಪ್ರಭಾವಕ್ಕೆ ತೆರೆದುಕೊಳ್ಳುತ್ತಲೇ ನಮ್ಮತನದ ಹುಡುಕಾಟದಲ್ಲಿ ತೊಡಗಿಕೊಂಡಿದ್ದ ಕಾಲದಲ್ಲಿ ಕುವೆಂಪುರವರು "ತರುಣರೀರಾ ಎದ್ದೇಳಿ" ಕವಿತೆಯ ಬರೆದು ಹಳೆ ಮತದ ಕೊಳೆ ಇಲ್ಲ ಹೊಸ ಮತದ ಹೊಳೆಯಲ್ಲಿ ಕೊಚ್ಚಿ ಹೋಗಲಿ, ಬರಲಿ ವಿಜ್ಞಾನ ಬುದ್ಧಿ ತರುಣರಿರ ಎದ್ದೇಳಿ, ಎಚ್ಚರಗೊಳ್ಳಿ! ಬಾಳಿ![3] ಎಂದು ಕರೆ ನೀಡುತ್ತಾ ವಿಚಾರ ಕ್ರಾಂತಿಗೆ ಆಹ್ವಾನ ನೀಡಿದ್ದಾರೆ.

"ಓ ಬನ್ನಿ ಸಹೋದರರೆ, ಬೇಗ ಬನ್ನಿ! ಗುಡಿ ಚರ್ಚು ಮಸೀದಿಗಳನ್ನು ಬಿಟ್ಟು ಹೊರಬನ್ನಿ ಬಡತನವ ಬುಡಮಟ್ಟ ಕೀಳ ಬನ್ನಿ, ಮೌಢ್ಯತೆಯ ಮಾರಿಯನು ಹೊಡದೂಡಲೈತನ್ನಿ, ವಿಜ್ಞಾನ ದೇವಿಗೆಯ ಹಿಡಿಯ ಬನ್ನಿ" ಎನ್ನುತ್ತಾರೆ. ಬಡತನ, ಮೌಢ್ಯತೆಯನ್ನು ಮೀರಬೇಕು, ಗುಡಿ ಚರ್ಚುಗಳಲ್ಲಿ ಕಳೆದು ಹೋಗದೆ ತಮ್ಮ ಉದ್ಧಾರಕ್ಕಾಗಿ ದುಡಿದು, ಮೇಲು ಕೀಳು ಭಾವನೆ ನೀಗಿ, ವೈಜ್ಞಾನಿಕ ತಿಳುವಳಿಕೆಯಿಂದ ಬದುಕಬೇಕೆಂದು ಕರೆ ನೀಡಿದ್ದಾರೆ.

**"ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?**
**ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?**
**ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?**
**ನಿನ್ನದೆಯ ದನಿಯೆ ಋಷಿ! ಮನು ನಿನಗೆ ನೀನು."[4]**

'ನಿರಂಕುಶ ಮತಿಗಳಾಗಿ' ಕುವೆಂಪುರವರ ಧ್ಯೇಯವಾಕ್ಯ ಯಾವ ಧರ್ಮ ಶಾಸ್ತ್ರಗಳ ಮಾತಿಗೂ ಮನಸೋಲದೆ ಸ್ವಂತ ವಿಚಾರವಂತಿಕೆಯಿಂದ ಆಲೋಚನೆಯಿಂದ ಬದುಕನ್ನು ಕಟ್ಟಿಕೊಳ್ಳಬೇಕು ಸ್ವಂತ ವಿಚಾರವಂತಿಕೆ ಬೆಳೆಸಿಕೊಳ್ಳಬೇಕು ಎಂಬುದು ಕುವೆಂಪುರವರ

ಮುಖ್ಯ ವಿಚಾರ. ಕುವೆಂಪುರವರ "ಕೋಗಿಲೆ ಮತ್ತು ಸೋವಿಯಟ್ ರಷ್ಯಾ" ಕವನ ಸಂಕಲನದ ಬಹುತೇಕ ಕವನಗಳು ಸಾಮಾಜಿಕ ಅಸಮಾನತೆಯನ್ನು ಸಾರುವ, ಕ್ರಾಂತಿಗೆ ಕರೆ ನೀಡುವ ನಿರ್ಲಕ್ಷತೆಗೆ ಒಳಗಾದವರನ್ನು ಮುನ್ನೆಲೆಗೆ ತರುವ ವಿಚಾರಗಳಿಂದ ಕೂಡಿವೆ.

ಕುವೆಂಪುರವರು "ಗೊಬ್ಬರ" ಎಂದು ಕವಿತೆಯೊಂದನ್ನು ಬರೆದಿದ್ದಾರೆ. 'ಗೊಬ್ಬರ'ದ ಬಗೆಗೆ ಕವಿತೆಯನ್ನು ಬರೆಯುವುದೇ ಒಂದು ವಿಶೇಷ:

**"ಗೊಬ್ಬರವನ್ನೆಲ್ಲಗಳೆಯುವೆ ಏಕೆ ಮರದ ತುದಿ**
**ನಲ್ಲಂಪುವೆತ್ತು ತಂಗಾಳಿಗೊಲೆಯುವ ಹೂವೆ?**
**ಜೀವವನೆ ಹೀರಿ ಕೊಬ್ಬಿಹ ಹೂವೆ**
**ಕಬ್ಬಕ್ಕೆ ನೀಂ ಮಾತ್ರ ವಸ್ತುವೇಂ?"**[5]

ಈ ಕವಿತೆಯಲ್ಲಿ ಸಾಮಾನ್ಯ ಸಂಗತಿಗಳನ್ನು, ವಸ್ತುಗಳನ್ನು ಕವಿತೆಯ ವಸ್ತುವಾಗಿಸಿಕೊಳ್ಳುವುದರ ಮೂಲಕ ನಿರ್ಲಕ್ಷ್ಯಕ್ಕೆ ಒಳಗಾದುದರ ಬಗ್ಗೆಯೂ ಗಮನ ನೀಡುವುದನ್ನು ಕಾಣಬಹುದು. ಗೊಬ್ಬರದಿಂದಲೇ ಶಕ್ತಿ ಪಡೆದು ಬೆಳೆಯುವ ಮರ, ಹೂ ಮುಖ್ಯವಾದರೆ ಗೊಬ್ಬರ ಮುಖ್ಯವಲ್ಲವೇ ಎಂಬ ಜಿಜ್ಞಾಸೆ, ಆ ಮೂಲಕ ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸುವ ಮನೋಭಾವ ಇಲ್ಲಿ ಕಂಡುಬರುತ್ತದೆ.

**"ದೇವರ ಪೂಜೆಗೆ ಕೊಯ್ಯರು ನಿನ್ನ**
**ಲಾಭದ ಪರೀಕ್ಷೆಯಲ್ಲಿ ನಿನಗಿಹ ಮಹಿಮೆಯ ನರಿಯರು ಹೂವೇ.**
**ಲೋಭದು ಪೇಕ್ಷೆಯಲ್ಲಿ ಬೆಡಗನು ಬಿಸುಡುವೆ ಗರ್ವನೀಗಿ**
**ಕಾಯಾಗುವೆ ಧರ್ಮಕ್ಕೆ ಶರಣಾಗಿ!"**[6]

ಇದು ಹೀರೆಯ ಹೂವನ್ನು ಕುರಿತು ಬರೆದ ಕವಿತೆ. ಕಾಯದಾಗ ಕಿತ್ತು ತಿನ್ನುವ ಜನ ಹೀರೆಯ ಹೂವನ್ನು ಅದರ ಸೊಗಸನ್ನು ತಲೆಯೆತ್ತಿಯೂ ನೋಡದಿರುವುದರ ಬಗ್ಗೆ ನಮ್ಮ ಗಮನ ಸೆಳೆಯುತ್ತಾರೆ. ಕುವೆಂಪು ತಮ್ಮ ಪಾಡಿಗೆ ಹೀಗೆ ಹೂವಾಗಿ, ಕಾಯಾಗಿ ಒದಗಿಬರುವ ಸಾಮಾನ್ಯ ಸಂಗತಿಗಳನ್ನು ಜನರನ್ನು ಕುರಿತು "ಶ್ರೀಸಾಮಾನ್ಯ" ಎಂದೇ ಕರೆದು ಲಕ್ಷ್ಯ ನೀಡುತ್ತಾರೆ. ಕುವೆಂಪುರವರ ಮತ್ತೊಂದು ಕವನ "ಕಲ್ಕಿ" ಪ್ರಖರವಾದ ಸಮಾಜವಾದಿ ಚಿಂತನೆಯ ರೂಪಕದಂತಿದೆ. ಸಾಮಾಜಿಕ ಅಸಮಾನತೆಯ ಭೀಕರತೆಯನು ಕಠೋರತೆಯನ್ನು "ಕಲ್ಕಿ"ಯ ಅವತಾರದಲ್ಲಿ, ಆಗಮನದಲ್ಲಿ ರೂಪಕ ಮೂಲಕ ಸೃಷ್ಟಿಸಿ ಬಡವರ ಪಾಲನು ಕಿತ್ತು ತಿನ್ನುವವರಿಗೆ ಎಚ್ಚರಿಕೆ ನೀಡುತ್ತಾರೆ.

**"ಧನಿಕರ ಮನೆಗಳು ಒಂದೆಡೆ ನಿಂತಿವೆ**
**ಬಡವರ ಗುಡಿಸಲು ಒಂದೆಡೆ ನಿಂತಿವೆ**
**ಜ್ಯೋತಿಯ ಮಣಿದೀಪಗಳಲ್ಲಿ**
**ಕತ್ತಲು, ಕಗ್ಗತ್ತಲು ಇಲ್ಲಿ!**
**ಆ ಕಡೆ ಉದ್ಯಾನ, ಈ ಕಡೆ ಸ್ಮಶಾನ"**[7]

ಹೀಗೆ ಸಾಮಾಜಿಕ ತಾರತಮ್ಯದ ಸಮಾಜದ ವಾಸ್ತವ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ, ಮನಸ್ಸಿಗೆ ಮುಟ್ಟುವಂತೆ ಸಶಕ್ತ ಭಾಷೆಯಲ್ಲಿ ಕಟ್ಟಿಕೊಳ್ಳುತ್ತಲೇ "ಬಡವರ

ಬೆಂಕಿಯ ನಾಲಿಗೆ ಚಾಚಿ, ಶ್ರೀಮಂತರ ನಪ್ಪಿತು ಬಾಚಿ, ಬಡವರ ಸಿಟ್ಟದು ಏನು ಪಿಶಾಚಿ" ಎಂದು ನೈತಿಕತೆಯ ಭಯ ಮೂಡಿಸಿ, ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿದ್ದಾರೆ.

ಕುವೆಂಪುರವರ "ಪೂಜಾರಿ" "ಕ್ರಾಂತಿಕಾಳಿ" "ಯಾವ ಕಾಲದ ಶಾಸ್ತ್ರವೇನು ಹೇಳಿದ್ದರೇನು" "ಪೂಜೆ" ಮೊದಲಾದ ಕವಿತೆಗಳು ಪುರೋಹಿತಶಾಹಿ, ಸಾಮ್ರಾಜ್ಯಶಾಹಿ ಮನೋಧರ್ಮಗಳನ್ನು ವಿರೋಧಿಸುತ್ತಾ ಅವುಗಳ ದಬ್ಬಾಳಿಕೆ ಪೈಶಾಚಿಕತೆಯನ್ನು ಹೊರಗೆಳೆದು ತೋರುವುದೇ ಆಗಿದೆ. "ಈ ದೇಶದ ಜಾತಿ ಪದ್ಧತಿ, ಮೂಢನಂಬಿಕೆ, ಸಾಮಾಜಿಕ ಅಸಮಾನತೆ ಹಾಗೂ ಪುರೋಹಿತಶಾಹಿ ಪ್ರವೃತ್ತಿಗಳನ್ನು ಅತ್ಯಂತ ದಿಟ್ಟತನದಿಂದ ಯಾವುದೇ ಒಡಂಬಡಿಕೆಯಿಲ್ಲದೆ ಪ್ರಶ್ನಿಸಿದ್ದಂತೆ ವೈಚಾರಿಕ ಚಿಕಿತ್ಸೆಗೆ ಒಳಪಡಿಸಿದ್ದಂತೆ ಇತರ ಅವರ ಸಮಕಾಲೀನ ಪ್ರಮುಖ ಬರಹಗಾರರಿಗೆ ಈ ಪ್ರಮಾಣದಲ್ಲಿ ಸಾಧ್ಯವಾಗಲಿಲ್ಲ ಎನ್ನುವುದು ಸ್ಪಷ್ಟವಾದ ಸಂಗತಿಯಾಗಿದೆ".[8] ಎಂಬ ಜಿ.ಎಸ್. ಶಿವರುದ್ರಪ್ಪನವರ ಮಾತುಗಳು ಕುವೆಂಪು ಸಾಹಿತ್ಯಕ್ಕೆ ಕನ್ನಡಿ ಹಿಡಿದಂತಿವೆ.

**"ಶಶಿಯು ರವಿಯು ತಾರಕೆಗಳು ದೀಪವಾಗಲಿ**
**ಕಾನನಗಳ ವಿಕಸಿತ ಸುಮಾ ಮಾಲೆಯಾಗಲಿ**
**ಜಲತರರಂಗ ಜಾರುಧಾರೆ ತೀರ್ಥವಾಗಲಿ**
**ಹೃದಯ ಪ್ರೇಮವೆಮ್ಮ ಧರ್ಮಶಾಸ್ತ್ರವಾಗಲಿ**
**ಏಳಿ ಏಳಿ ಬೇಗನೆ.!**
**ಜಗದ ಗುಡಿಗೆ ಹೋಗುವ"**[9]

ನಿಸರ್ಗದ ಆರಾಧನೆಯ ಮೂಲಕ ಕುವೆಂಪುರವರು "ಪೂಜೆ" ಎಂಬ ಪದ್ಯದಲ್ಲಿ ಶತ ಶತಮಾನಗಳಿಂದ ಗುಡಿಯಲ್ಲಿ ಕೂರಿಸಿ ದೇವರ ಹೆಸರಲಿ ಪುರೋಹಿತಶಾಹಿತನವನ್ನು ನಡೆಸುತ್ತಿದ್ದ ಸಂಪ್ರದಾಯಕ್ಕೆ ತೆರೆ ಎಳೆದಿದ್ದಾರೆ. ಪ್ರಕೃತಿ ಆರಾಧನೆ, ಮಾನವ ಪ್ರೇಮವೇ ಪೂಜೆ ಎಂದು ಸಾರಿದ್ದಾರೆ. ನಿಸರ್ಗವನ್ನು ಪ್ರೀತಿಸಿ, ಮಾನವಧರ್ಮವನ್ನು ಪೂಜಿಸಿ, ಕಾಯಕತತ್ವದಿಂದ ನಡೆಯುವುದೇ ಹೊಸ ಬಗೆಯ ಪೂಜೆ ಎಂದು ಕುವೆಂಪು ತಿಳಿಸಿದ್ದಾರೆ.

"ಎಷ್ಟು ದೇವರ ನೀನೇಷ್ಟು ನಂಬಿದರೇನು ಒಂದಿಷ್ಟು ನಿನ್ನ ನೀನಂಬದಿರೆ ನಿನ್ನ ನೀನು" ಎಂದು ಸಾರಿದ ಸ್ವಾಮಿ ವಿವೇಕಾನಂದರ ವಿಚಾರಗಳಿಂದ ಬೆಳೆದ ಕುವೆಂಪುರವರು ಆತ್ಮವಿಶ್ವಾಸ ಆತ್ಮಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕೆಂದು ಯುವಕರಿಗೆ ಕರೆ ನೀಡಿದ್ದಾರೆ. ಯುವ ಜನತೆ ವೈಚಾರಿಕ ಪ್ರಜ್ಞೆಯಿಂದ ಆತ್ಮವಿಶ್ವಾಸದಿಂದ ಕಾಯಕದಲ್ಲಿ ತೊಡಗಬೇಕೆನ್ನುತ್ತಾರೆ.

**"ನೇಗಿಲ ಹಿಡಿದು ಹೊಲದೊಳು ಹಾಡುತ**
**ಉಳುವಾ ಯೋಗಿಯ ನೋಡಲ್ಲಿ**
**ಫಲವನು ಬಯಸದೆ ಸೇವೆಯ ಪೂಜೆಯು"**[10]

ದೇಶದ ಬೆನ್ನೆಲುಬಾದ ರೈತರನ್ನು ಮೊದಲಿಗೆ ನೇಗಿಲಯೋಗಿ ಎಂದು ಕರೆದವರು ಕುವೆಂಪು. ಕಾಯಕ ಒಂದು ಯೋಗ, ಕಾಯಕಧರ್ಮದ ಮೂಲಕವೇ ಮುಕ್ತಿ ಎಂದು ನಂಬಿದ್ದವರು. ಹೀಗೆ ಕಾಯಕ ಮಾಡುವವನು ಯೋಗಿಯಾಗುವ ಪರಿ ಕನ್ನಡದ ಚಿಂತನೆಗೆ ಹೊಸದು. ಕರ್ಮವೇ ಇಹಪರಕ್ಕೆ ಸಾಧನವೆಂದು ವಚನಕಾರರು ಸಾರಿದ್ದಾರೆ. ರೈತರನ್ನು

ಶ್ರೀಸಾಮಾನ್ಯರನ್ನು ಅವರ ಕಾಯಕದ ಮೂಲಕವೇ ಘನತೆಯಿಂದ ಕಾಣಬೇಕೆಂಬುದನ್ನು ದುಡಿಮೆಯ ಮೌಲ್ಯವನ್ನು ಕುವೆಂಪು ಎತ್ತಿ ಹಿಡಿದಿದ್ದಾರೆ. ಹೀಗೆ ಸಾಮಾಜಿಕ ನ್ಯಾಯದ ವಿಚಾರಗಳನ್ನು ಅವರ ಬಹುಪಾಲು ಕವಿತೆಗಳಲ್ಲಿ ನಾವು ಕಾಣಬಹುದು.

ಕುವೆಂಪುರವರು ಬದುಕಿದ್ದ ಕಾಲಘಟ್ಟವು ಸಂಕ್ರಮಣ ಕಾಲದ್ದು , ವಸಾಹತು ಶಾಹಿ ಪ್ರಭಾವ ಮತ್ತು ಸಮಾಜದಲ್ಲಿ ಉಂಟಾಗುತ್ತಿದ್ದ ಸಾಮಾಜಿಕ ಬದಲಾವಣೆಯ ಸನ್ನಿವೇಶದಲ್ಲಿ ಹೊಸ ಬಗೆಯ ಬದುಕು, ಆಲೋಚನೆಯನ್ನು ಸಮಾಜ ಕಟ್ಟಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಕುವೆಂಪು ಅದಕ್ಕೆ "ಹೊಸಬಾಳಿನ ಗೀತೆ" ಎಂಬ ನಾಂದಿ ಪದ್ಯವನ್ನು ಹಾಡಿ, ಹಾರೈಸಿದರು.

**"ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು**
**ಎಂಬ ನವಯುಗವಾಗಿ ಘೋಷಿಸಿದೆ ಕೇಳಿ**
**ಯುಗಯುಗದ ದಾರಿದ್ರ ಭಾರದಿಂದ ಬೆನ್‌ಬಾಗಿ**
**ಗೋಳಿಡುವ ಬಡಜನರೆ ಏಳಿರೈ, ಏಳಿ||**
**ಕೈಲಾಗದವರೆಂಬ, ನಾವು ಕೀಳೆಂದೆಂಬ**
**ಹಣೆಬರಹವೆಂಬ ಮೂಢತೆಯ ನೀಗಿ**
**ಯುಗ ಚಕ್ರ ಪರಿವರ್ತನೆಗೆ ಸರ್ವರೂ ಸೇರಿ"**[11]

ಆತ್ಮವಿಶ್ವಾಸದಿಂದ ಸಮಬಾಳಿಗಾಗಿ, ಸಮ ಪಾಲಿಗಾಗಿ ಒಂದಾಗಿ ಹೋರಾಡಲು ಕರೆ ನೀಡುವ ನಿರಂತರ ಹಲವಾರು ಕವಿತೆಗಳನ್ನು ಮತ್ತು ಭಾಷಣಗಳನ್ನು ಕುವೆಂಪು ಬರೆದಿದ್ದಾರೆ. ಕುವೆಂಪುರವರ ವೈಚಾರಿಕ ಮನೋಭಾವಕ್ಕೆ ಮುಖ್ಯ ಕಾರಣ ವೈಜ್ಞಾನಿಕ ದೃಷ್ಟಿ. ಕುವೆಂಪು ಅವರಂತೆ ಆಧುನಿಕ ವಿಜ್ಞಾನದ ತಿಳುವಳಿಕೆಯನ್ನು ತಮ್ಮ ಕಾವ್ಯದ ವಸ್ತುವನ್ನಾಗಿಸಿಕೊಂಡವರು ತೀರಾ ವಿರಳ, ಕುವೆಂಪುರವರು "ಯಂತ್ರರ್ಷಿ" ಕವನದಲ್ಲಿ ವಿಜ್ಞಾನಿಯನ್ನು ಯಂತ್ರದ ಋಷಿ ಎಂದೇ ಕರೆದಿದ್ದಾರೆ. ವಿಜ್ಞಾನ ಮತ್ತು ವೈಜ್ಞಾನಿಕ ತಿಳುವಳಿಕೆಗಳನ್ನು ಮತ್ತು ಆರಾಧ್ಯ ದೇವವಾಗಬೇಕೆಂಬ ತಿರಳಿಕೆಯನ್ನು ಕುವೆಂಪು ನೀಡಿದ್ದಾರೆ.

ಕುವೆಂಪುರವರ ಕವಿತೆಗಳನ್ನು ಅವುಗಳ ಭಾವ ಸೌಂದರ್ಯಕ್ಕಾಗಿ ಓದುವ ವಸ್ತು ವೈವಿಧ್ಯತೆ ಮತ್ತು ನಿಸರ್ಗದ ಸವಿಗಾಗಿ ಓದುವ ವಾಚರಿಕರಿಗೆ ಕವಿ ಕುವೆಂಪುರವರು "ನನ್ನ ಕವಿ ಪ್ರತಿಭೆ ತನ್ನ ರಸ ಧರ್ಮಕ್ಕೆ ಒಂದಿನೀತು ಭಗ ಬರದಂತೆ ವೈಚಾರಿಕ ಬುದ್ಧಿಯನ್ನು ವೈಜ್ಞಾನಿಕ ದೃಷ್ಟಿಯನ್ನು ಸಮ ಪ್ರಮಾಣದಲ್ಲಿ ಅಳವಡಿಸಿಕೊಂಡಿರುವುದನ್ನು ಸಹೃದಯರರು ಗುರುತಿಸಲಾಗದಿದ್ದರೆ ನನ್ನನ್ನು ಅರಸಿಕವಾಗಿ ಮಾತ್ರ ಪರಿಶೀಲಿಸಿದಂತಾಗಿದೆ ನನ್ನ ಸಂಪೂರ್ಣತ್ವಕ್ಕೆ ಚ್ಯುತ್ತಿ ಬರುತ್ತದೆ." (ಪುಟ ಸಂಖ್ಯೆ 68 ನೆನಪಿನ ದೋಣಿಯಲ್ಲಿ) ಎಂಬ ಆಕ್ಷೇಪಣೆಯನ್ನು ಮಾಡಿದ್ದಾರೆ. ಏಕೆಂದರೆ "ಆನಂದಮಯ ಈ ಜಗ ಹೃದಯಾ ಬಾರಿಸು ಕನ್ನಡ ಡಿಂಡಿಮವಾ." "ಓ ನನ್ನ ಚೇತನ, ಆಗೂ ನೀ ಅನಿಕೇತನ"- ಇಂತಹ ಹಲವಾರು ಕವಿತೆಗಳ ಆಳದಲ್ಲಿ ವೈಚಾರಿಕ ತಿಳುವಳಿಕೆಯಿದೆ. ಈ ಕವಿತೆಗಳನ್ನು ಹಾಡಿಕೊಳ್ಳುತ್ತಾ ಭಾವದ ವಲಯದಲ್ಲೇ ನಿಲ್ಲದೆ ಆಂತರ್ಯದ ದನಿಯನ್ನು ಗಮನಿಸಬೇಕಾಗುತ್ತದೆ ಇದನ್ನೇ ಕುವೆಂಪು ನೆನಪಿಸುತ್ತಾರೆ.

**ಉಪಸಂಹಾರ:**

ಕುವೆಂಪುರವರ ಕವಿತೆಗಳು ಕೇವಲ ಸೌಂದರ್ಯ ನಿಷ್ಠೆಯ ಹಾಗೂ ಅವುಗಳ ಹಿಂದೆ ಗಟ್ಟಿಮುಟ್ಟಾದ ವೈಚಾರಿಕತೆಯೊಂದು ಕ್ರಿಯಾಶೀಲವಾಗಿದೆ ಅದನ್ನು ಸ್ಥೂಲವಾಗಿ ತಾತ್ವಿಕ ವೈಚಾರಿಕತೆ ಮತ್ತು ಸಾಮಾಜಿಕ ವೈಚಾರಿಕತೆ ಎಂದು ಕರೆಯಬಹುದು. ಆದರೆ ಈ ಎರಡರ ಉದ್ದೇಶವು ಮನುಷ್ಯನ 'ಏಕತೆ'ಯ ಪರವಾಗಿ ದುಡಿಯುವ ಕಾಳಜಿಯಿಂದ ಕೂಡಿದ್ದಾಗಿದೆ. ಕುವೆಂಪು ಅವರ ಕವಿತೆಗಳಲ್ಲಿ ಸೌಂದರ್ಯ ನಿಷ್ಠೆ ಆಧ್ಯಾತ್ಮಿಕ ನಿಲುವು ಮತ್ತು ವೈಚಾರಿಕತೆಗಳು ಒಂದರಿಂದ ಮತ್ತೊಂದನ್ನು ಬೇರ್ಪಡಿಸಲಾಗದಂತೆ ಹೆಣದುಕೊಂಡಿವೆ ಎಂದು ಜಿಎಸ್ ಶಿವರುದ್ರಪ್ಪನವರು ಕುವೆಂಪುರವರ ಕವಿತೆಗಳ ಅಖಂಡತೆಯನ್ನು ಎತ್ತಿ ಹಿಡಿದಿದ್ದಾರೆ.

ಹೀಗೆ ಕುವೆಂಪುರವರ ಕವಿತೆಗಳು ಭಾವಗೀತೆಗಳ ಲಯಬದ್ಧ ರಚನೆಗಳಂತೆ, ಭಾವ ಸೌಂದರ್ಯದಿಂದ ಕಂಗೊಳಿಸಿದರು ಅವುಗಳ ಬಡಲ್ಲಾಳದಲ್ಲಿ ಕವಿಯ ವಿಚಾರವಂತಿಕೆ ಸೂಕ್ತವಾಗಿ ಮನೆಮಾಡಿದೆ. ಕುವೆಂಪು ಕವಿತೆಗಳಲ್ಲಿ ವಿಚಾರವಂತಿಕೆಯನ್ನು ತುಂಬುತ್ತಾ ವೈಚಾರಿಕ ಅಂಶಗಳನ್ನು ಸಾರಲು ಕವಿತೆಗಳನ್ನೇ ಸಾಧನೆಗಳನ್ನಾಗಿ ಮಾಡಿಕೊಳ್ಳುತ್ತಾ ನಮ್ಮ ಸಾಮಾಜಿಕ ಬದುಕನ್ನು ಸುಧಾರಿಸುವ, ಬಲುಎತ್ತರಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಿದ ಪವರ್ತಕರು.

**ಅಡಿ ಟಿಪ್ಪಣಿಗಳು:**


1. ಸುಜಾತಾ ಲಕ್ಷ್ಮಿಪುರ. (2021). ವಿಚಾರವಾದಿ ಕುವೆಂಪು. ಸಿವಿಜಿ. ಬೆಂಗಳೂರು. ಪು.ಸಂ. 5
2. ಶಿವರುದ್ರಪ್ಪಜಿ. ಎಸ್. (ಸಂಪಾದಕರು). (2003). ಶ್ರೀ ಕುವೆಂಪು. ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು. ಪು.ಸಂ. IV
3. ಶಿವಾರೆಡ್ಡಿ ಕೆ.ಸಿ. (ಸಂಯೋಜಕ ಸಂಪಾದಕರು). (2000). ಕುವೆಂಪು ಸಮಗ್ರ ಕಾವ್ಯ: ಸಂಪುಟ-01. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 370
4. ಶಿವಾರೆಡ್ಡಿ ಕೆ.ಸಿ. (ಸಂಯೋಜಕ ಸಂಪಾದಕರು). (2000). ಕುವೆಂಪು ಸಮಗ್ರ ಕಾವ್ಯ: ಸಂಪುಟ-01. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 368
5. ಶಿವಾರೆಡ್ಡಿ ಕೆ.ಸಿ. (ಸಂಯೋಜಕ ಸಂಪಾದಕರು). (2000). ಕುವೆಂಪು ಸಮಗ್ರ ಕಾವ್ಯ: ಸಂಪುಟ-01. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 36
6. ಶಿವಾರೆಡ್ಡಿ ಕೆ.ಸಿ. (ಸಂಯೋಜಕ ಸಂಪಾದಕರು). (2000). ಕುವೆಂಪು ಸಮಗ್ರ ಕಾವ್ಯ: ಸಂಪುಟ-01. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 696
7. ಶಿವಾರೆಡ್ಡಿ ಕೆ.ಸಿ. (ಸಂಯೋಜಕ ಸಂಪಾದಕರು). (2000). ಕುವೆಂಪು ಸಮಗ್ರ ಕಾವ್ಯ: ಸಂಪುಟ-01. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 168
8. ಶಿವರುದ್ರಪ್ಪಜಿ. ಎಸ್. (ಸಂಪಾದಕರು). (2003). ಶ್ರೀ ಕುವೆಂಪು. ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು. ಪು.ಸಂ. VII

9. ಶಿವಾರೆಡ್ಡಿ ಕೆ.ಸಿ. (ಸಂಯೋಜಕ ಸಂಪಾದಕರು). (2000). ಕುವೆಂಪು ಸಮಗ್ರ ಕಾವ್ಯ: ಸಂಪುಟ-01. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 59
10. ಶಿವಾರೆಡ್ಡಿ ಕೆ.ಸಿ. (ಸಂಯೋಜಕ ಸಂಪಾದಕರು). (2000). ಕುವೆಂಪು ಸಮಗ್ರ ಕಾವ್ಯ: ಸಂಪುಟ-01. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 28
11. ಶಿವಾರೆಡ್ಡಿ ಕೆ.ಸಿ. (ಸಂಯೋಜಕ ಸಂಪಾದಕರು). (2000). ಕುವೆಂಪು ಸಮಗ್ರ ಕಾವ್ಯ: ಸಂಪುಟ-01. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 373

## ಪರಾಮರ್ಶನ ಗ್ರಂಥಗಳು:

1. ಶಿವಾರೆಡ್ಡಿ ಕೆ.ಸಿ. (ಸಂಯೋಜಕ ಸಂಪಾದಕರು). (2000). ಕುವೆಂಪು ಸಮಗ್ರ ಕಾವ್ಯ: ಸಂಪುಟ-01. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
2. ಶಿವರುದ್ರಪ್ಪ ಜಿ. ಎಸ್. (2005). ಕುವೆಂಪು ಪುನರವಲೋಕನ. ಅಂಕಿತ ಪುಸ್ತಕ. ಬೆಂಗಳೂರು.
3. ಶಿವರುದ್ರಪ್ಪ ಜಿ. ಎಸ್. (ಸಂಪಾದಕರು). (2003). ಶ್ರೀ ಕುವೆಂಪು. ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು.
4. ಸುಬ್ಬಣ್ಣ ಕೆ. ವಿ. (1999). ಕುವೆಂಪು ಪುಟ್ಟ ಕನ್ನಡಿ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
5. ಶಿವಾರೆಡ್ಡಿ ಕೆ. ಸಿ. (2003). ಕನ್ನಡದ ಹಾಡು. ಅಧ್ಯಯನ ಮಂಡಲ. ಬೆಂಗಳೂರು.
6. ಸುಜಾತಾ ಲಕ್ಷ್ಮಿಪುರ. (2021). ವಿಚಾರವಾದಿ ಕುವೆಂಪು. ಸಿವಿಜಿ. ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.